### ಸಿಎಫ್‌ಟಿಆರ್‌ಐನಲ್ಲಿ ಕನ್ನಡ ರಾಜ್ಯೋತ್ಸವ

# ಹಲವು ಮಹನೀಯರ ತ್ಯಾಗದ ಫಲ ಈ ಕರ್ನಾಟಕ: ಆರ್.ಧ್ರುವನಾರಾಯಣ



ಮೈಸೂರು, ನ.2(ಆರ್‌ಕೆಬಿ)– ಕರ್ನಾಟಕದ ಏಕೀಕರಣಕ್ಕೆ ಹಲವು ಮಂದಿ ಮಹನೀಯರು ಹೋರಾಟ ನಡೆಸಿದ್ದಾರೆ. ಅವರೆಲ್ಲರ ತ್ಯಾಗದ ಫಲವಾಗಿ ನಾವಿಂದು ಏಕೀಕರಣಗೊಂಡ ಕರ್ನಾಟಕದಲ್ಲಿದ್ದೇವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಮತ್ತು ಕನ್ನಡ ಸಹೃದಯ ಬಳಗದ ವತಿಯಿಂದ ಚೆಲುವಾಂಬ ಅರಮನೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ, ಮತನಾಡಿದರು. ದೇಶದ ಪ್ರತಿಷ್ಠಿತ ಆಹಾರ ಸಂಶೋಧನಾ ಕೇಂದ್ರವಾದ ಸಿಎಫ್‌ಟಿಆರ್‌ಐ ಮೈಸೂರಿನಲ್ಲಿರುವುದೇ ಒಂದು ಹೆಮ್ಮೆಯ ಸಂಗತಿ. ನಾನಿಲ್ಲಿಗೆ 3–4 ಬಾರಿ ಭೇಟಿ ನೀಡಿದ್ದೇನೆ. ಈ ಹಿಂದೆ ರಾಗಿಮುದ್ದೆ ತಯಾರಿಸುವ ಯಂತ್ರ ಮತ್ತು ಇಡ್ಲಿ ತಯಾರಿಕಾ ಯಂತ್ರ ನೋಡಲು ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಈ ಬಾರಿ ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸಿದ್ದೇನೆ. ದೇಶದ ಎಲ್ಲಾ ಭಾಷೆಯ ಜನರು ಇಲ್ಲಿದ್ದಾರೆ. ನಿಮ್ಮ ಏಕತಾ ಮನೋಭಾವ ಶ್ಲಾಘನೀಯ ಎಂದರು. ಈ ವೇಳೆ ಸಂಸ್ಥೆಯ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿದರು. ನಂತರ ನಾಡಗೀತೆ ಹಾಡಿ, ಸಿಹಿ ವಿತರಿಸಲಾಯಿತು.

ಆಂದೋಲನ

# ್ಯೋತ್ಸವ ಆಚರಣೆ

ಜಿಕ ಸೇವೆಗಳ ಮೂಲಕ ರಾಜ್ಯೋತ್ಸವ ಆಚರಿಸಿದರೆ, ನಟ ಪುನೀತ್‌ರಾಜ್‌ಕುಮಾರ್ ಸ್ಮರಣೆಯೊಂದಿಗೆ ಕನ್ನಡ
ೀಗಳಲ್ಲಿ ಕನ್ನಡ ಬಾವುಟ ರಾರಾಜಿಸಿದವು.

## ಕನ್ನಡದಲ್ಲಿ ಮಾತನಾಡಲು ಹಿಂಜರಿಯಬೇಕಿಲ್ಲ: ಅನ್ನಪೂರ್ಣ

ಮೈಸೂರು: ಸಿಎಫ್‌ಟಿಆರ್‌ಐನಲ್ಲಿ ಕನ್ನಡದಲ್ಲಿ ಮಾತನಾಡಲು ಮತ್ತು ಕನ್ನಡಿಗರೊಂದಿಗೆ ಅನ್ಯ ರಾಜ್ಯದ ವಿದ್ಯಾರ್ಥಿಗಳು, ಸಿಬ್ಬಂದಿ ಬೆರೆಯುವುದಕ್ಕೆ ಹಿಂಜರಿಯಬೇಕಿಲ್ಲ ಎಂದು ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ(ಸಿಎಫ್‌ಟಿಆರ್‌ಐ) ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಹೇಳಿದರು.

ಸಿಎಫ್‌ಟಿಆರ್‌ಐ ಹಾಗೂ ಕನ್ನಡ ಸಹೃದಯ ಬಳಗದಿಂದ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ತ್ರಿಭಾಷಾ ಸೂತ್ರದಡಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಮೈಸೂರು ಒಡೆಯರ ಉದಾರತೆಯ ಫಲವಾಗಿ 1950ರಲ್ಲಿ ಸಂಸ್ಥೆ ಸ್ಥಾಪನೆಗೊಂಡಿದೆ. ಸಂಸ್ಥೆಯಲ್ಲಿ ಎಲ್ಲರೂ ಕನ್ನಡ ಕಲಿಯಬೇಕು. ಆ ವಾತಾವರಣ ಸೃಷ್ಟಿಯಾಗಬೇಕು ಎಂದರೆ ತಿಂಗಳಲ್ಲಿ ಒಮ್ಮೆಯಾದರೂ ಕನ್ನಡ ದಿನ ಆಚರಿಸಬೇಕು. ಆ ದಿನ ಎಲ್ಲರೂ ಕನ್ನಡದಲ್ಲಿಯೇ ಮಾತನಾಡಬೇಕು. ಹೀಗಾಗಿ ದಿನ ನಿಗದಿಗೊಳಿಸಿ ಎಂದು ಕನ್ನಡ ಸಹೃದಯ ಬಳಗಕ್ಕೆ ಸೂಚಿಸಿದ ಅವರು, 80ರ ದಶಕದಲ್ಲಿ ಮೈಸೂರಿಗೆ ಬಂದೆ. ಅಲ್ಲಿಂದಲೂ ಕನ್ನಡ ಮತ್ತು ಮೈಸೂರು ನನ್ನ ಜೀವನದ ಭಾಗವಾಗಿವೆ. ಕನ್ನಡಿಗರ ಸರಳತೆ, ಪ್ರೀತಿ, ಆಹಾರ ಪದ್ಧತಿ ನನ್ನನ್ನು ಮೋಡಿ ಮಾಡಿದೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಕನ್ನಡದ ಉಳಿವಿನಲ್ಲಿಯೇ ರಾಜ್ಯದ ಜನರ ಅಭಿವೃದ್ಧಿ ಅಡಗಿದೆ. ಭಾಷಾಭಿಮಾನ ಮೂಡಬೇಕು. ಇತಿಹಾಸ- ಪರಂಪರೆಗಳನ್ನು ತಿಳಿಯಬೇಕು. ಬಾದಾಮಿ- ಐಹೊಳೆ-ಹಂಪಿ- ಬೇಲೂರು ಕಟ್ಟಿದ ಕನ್ನಡಿಗರ ಶ್ರಮವನ್ನು ಅರಿಯಬೇಕು ಎಂದು ಹೇಳಿದರು. ಬಳಗದ ಕಾರ್ಯದರ್ಶಿ ಎಚ್.ಇ.ಕೃಷ್ಣಯ್ಯ ಹಾಜರಿದ್ದರು.

